doc-407
T.P-2

(1)

R No KRNN 12

27-11-1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily

Mysore 4

– For Influential Publicity –

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ಥಾರಭಿರತ ಎಂ. ಎಸ್. ಕೃಷ್ಣರಾವ್ 3 ಪ,ಪ

ವಿದೇಶದಿಂದ ಭಾರತಕ್ಕೆ ಆಹಾರ ಧಾನ

ರ ರ

ಡಾ ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ॥ ಎಂ. ಸಿ. ಮೋದಿಯವರು ತಾ॥ 30 ರಂದು ಉಲ್ಲಾಸ್‌ನಗರದಲ್ಲಿ ನೇತ್ರ ಚಿಕಿತ್ಸಾ ಶಿಬಿರ ನಡೆಸುತ್ತಾರೆ.

ಸರಳ, ಕಟ್ಟುನಿಟ್ಟಿನ, ಅತಿ ಮಿತವ್ಯಯ ವಿವಾಹ

ಮಂಡ್ಯ— ಪ್ರಗತಿಶೀಲ ಯುವಜನ ಸಂಘ ವ್ಯವಸ್ಥೆ ಮಾಡಿದ್ದ ವಿವಾಹವು ಮೇಲ್ಕಂಡ ರೀತಿಯಲ್ಲಿ ನಡೆಯಿತು ; ಮಂಡ್ಯದ ಶ್ರೀ ದಾಸೇಗೌಡ ಮತ್ತು ಕೊಡಗಿನ ಶ್ರೀಮತಿ ರತ್ನ ಇವರ ವಿವಾಹದಲ್ಲಿ ಮಾನುಗಾರಿಕೆ ಸೈಟ್ ಮಂತ್ರಿ ಪುರೋಹಿತರಾಗಿದ್ದರು ; ಪುರೋಹಿತನ ಬೇಜಾರಿನ ಮತ್ತು ಆಯಾಸ ಕಾರ್ಯಕ್ರಮಗಳಿಲ್ಲ; ವಧು ವರ ನಿಷ್ಠೆಯ ಪ್ರಮಾಣ ವಚನ ಸ್ವೀಕರಿಸಿದರು ; ಮದುವೆ ಗಂಭೀರವಾಗಿ ಮುಗಿಯಿತು ; ಚಪ್ಪರವಿಲ್ಲ, ತೋರಣಗಳಿಲ್ಲ ; ಓಲಗ ತಮಟೆ ಇಲ್ಲ, ಮೆರವಣಿಗೆ ಇಲ್ಲ

ಕಲಬೆರಕೆಗೆ ಶಿಕ್ಷೆ

ತ್ರಿವೇಂದ್ರಂ— ಒಂದು ಖ್ಯಾತ ವಸತೀಗೃಹದಲ್ಲಿ ಹಾಲು ಮತ್ತು ಮೊಸರಿಗೆ ಕಲಬೆರಕೆ ಮಾಡಿದ ಅಪರಾಧಕ್ಕಾಗಿ ಅದರ ಮಾಲೀಕನಿಗೆ 6 ತಿಂಗಳು ಸಜಾ ಮತ್ತು ರೂ. 1000 ಜುಲ್ಮಾನೆ ವಿಧಿಸಲಾಯಿತು.

ಕನ್ನಡ ಜ್ಞಾನಪೀಠ

ಬೆಂಗಳೂರು— ತಮಿಳುನಾಡು ವಿಶ್ವವಿದ್ಯಾಲಯದಲ್ಲಿ ಕನ್ನಡ ಜ್ಞಾನಪೀಠ ಸ್ಥಾಪನೆ ವಿಷಯವನ್ನು ತಾವು ಕರ್ನಾಟಕ ವಿದ್ಯಾ ಮಂತ್ರಿಗಳೊಡನೆ ಚರ್ಚಿಸುವುದಾಗಿ ತಮಿಳುನಾಡು ವಿದ್ಯಾಮಂತ್ರಿ ಶ್ರಿ ನಡೆಂಚೀಷಿಯನ್ನರು ಇಲ್ಲಿಯ ತಮಿಳು ಸಂಘದಲ್ಲಿ ಭರವಸೆ ಇತ್ತರು

ಪ್ರವಾಹಗಳಿಂದ ನಷ್ಟ

ನವದೆಹಲಿ— ಪ್ರವಾಹಗಳಿಂದ ದೇಶಾದ್ಯಂತ ರೂ. 430 ಕೋಟಿ ನಷ್ಟವಾಗಿರುವುದಾಗಿ ಪ್ರಕಟವಾಗಿದೆ.

ಕಾಂಗ್ರೆಸ್ ಸಮಿತಿ ವಿಸರ್ಜನೆ

ಪಾಟ್ನಾ— ಬೀಹಾರ್ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯನ್ನು ವಿಸರ್ಜಿಸಲಾಗುವುದೆಂದು ಹೇಳಲಾಗಿದೆ

For Large Range of Daily Wear

Nylex, Cotton, Voile, etc Sarees

in up-to-date Designs

Please Visit :

Bank Road Bahusar

ಅಪರಾಧವೆಂದು ಪರಿಗಣನೆ

ನವ ದೆಹಲಿ – ಚಿಕ್ಕ-ನಾಣ್ಯಗಳನ್ನು ಕರಗಿಸುವ, ನಾಶಪಡಿಸುವ, ದಾಸ್ತಾನು ಮಾಡುವುದನ್ನು ತಕ್ಷೀರೆಂದು ಶಾಸನ ಮಾಡಲು ರಾಜ್ಯಸಭೆ ತೀರ್ಮಾನಿಸಿತು.

★

ಭಾರಿ ಕಳ್ಳತನ

ಇಂಗ್ಲೆಂಡಿನ ಬಾರಿಂಗ್‌ನಲ್ಲಿ ಒಂದುಕಡೆ ರೂ. 3800000 ಬೆಲೆಯ ಚಿನ್ನ ಮತ್ತು ಸರಾಫ್‌ರ ಲೋಹೆ ತುಂಬಿದ ದೊಡ್ಡ ಪಾತ್ರೆಯನ್ನು ಕಳ್ಳರು ಕದ್ದು ತಮ್ಮ ಟ್ರಕ್‌ಗೆ ಹಾಕಿಕೊಂಡು ಪರಾರಿಯಾಗಿರುವರು.

★

ಹೊರಗಿನಿಂದ ಆಹಾರಧಾನ್ಯ

ನವದೆಹಲಿ— ಪ್ರಸ್ತುತ ವರ್ಷದಲ್ಲಿ ಹೊರಗಿನಿಂದ 3.5 ಮಿಲಿಯ ಟ್ ಆಹಾರಧಾನ್ಯ ಕೊಳ್ಳಲಾಗಿದೆಯೆಂದು ಲೋಕ ಸಭೆಯಲ್ಲಿ ತಿಳಿಸಲಾಯಿತು.

★

ವೈದ್ಯಕೀಯ ಪರೀಕ್ಷೆಗಳು

ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ, ದ್ವಿತೀಯ ಹಾಗೂ ಅಂತಿಮ ಎಂ ಬಿ ಬಿ ಎಸ್ ಪರೀಕ್ಷೆಗಳು 1975 ನೇ ಜನವರಿ 20 ರಂದು ಪ್ರಾರಂಭವಾಗುವುದೆಂದು ಪರೀಕ್ಷಾ ನಿಯಂತ್ರಣಾಧಿಕಾರಿ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

●

ಕಾಂಗ್ರೆಸ್ (ಸಂಸ್ಥಾ) ಕಾರ್ಯಕರ್ತರ ಸಭೆ

ಮೈಸೂರು— ಸಂಸ್ಥಾ ಕಾಂಗ್ರೆಸ್ ಕಚೇರಿಯಲ್ಲಿ ಮೇಲ್ಕಂಡ ಸಭೆಯಲ್ಲಿ ತಾ ॥ 28 ರಂದು ಗುರುವಾರ ಸಂಜೆ 5 ಗಂಟೆಗೆ ಶ್ರೀ ಎಸ್. ನಿಜಲಿಂಗಪ್ಪನವರು ಭಾಷಣ ಮಾಡುವರೆಂದು, ಕಾರ್ಯದರ್ಶಿ ಶ್ರೀ ಎಂ. ಕೆ. ಮುಕುಂದರಾವ್ ತಿಳಿಸಿರುತ್ತಾರೆ

★

ಆಂಧ್ರ ಪ್ರದೇಶದ ಅದಾಯ ಕಳೆದ ಸಾಲಿನಲ್ಲಿ ಶೇಕಡ 12 ಹೆಚ್ಚಿದೆ

ನಾಲ್ವರ ಮರಣ

ಮಧುರೈ — ತುಂಬುಂ ಪರ್ವ ಬಳಿ ಒಂದು ಬಸ್ ಬಿದ್ದು ನಾಲ್ವರು ಸತ್ತು ಇಪ್ಪತ್ತೈರಡು ಮಂದಿ ಗಾಯಗೊಂಡರು.

★

ರಥೋತ್ಸವ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿ ರಥೋತ್ಸವ ಈ ತಿಂಗಳ 30 ನೇ ತಾರೀಖು ಬೆಳಿಗ್ಗೆ 11-30 ಗಂಟೆಗೂ, ತೆಪ್ಪೋತ್ಸವ ಮುಂದಿನ ತಿಂಗಳು 2 ನೇ ತಾರೀಖು ರಾತ್ರಿ ನಡೆಯುವುದು.

★

ಆಟಗಾರರಿಗೆ ವೇತನ

ಸಂತೋಷ್ ಪಂಥದಲ್ಲಿ ಗೆದ್ದ ಪಂಜಾಬು ಫುಟ್ ಬಾಲ್ ತಂಡದ 18 ಆಟಗಾರರಿಗೆ ಒಂದು ವರ್ಷ ಕಾಲ ತಿಂಗಳಿಗೆ ನೂರ ಐವತ್ತು ರೂಪಾಯಿ ವೇತನ ಕೊಡಲು ಪಂಜಾಬು ಸರ್ಕಾರ ನಿರ್ಧರ ಮಾಡಿರುವುದಾಗಿ ಜಲಂಧರ ವಾರ್ತೆ.

★

ಪ್ರತಿಭಟನೆ

ಪಾಟ್ನಾದಿಂದ ಬಂದಿರುವ ವರದಿ ಪ್ರಕಾರ ಸೋನೆಪುರ ದನ ಪ್ರದರ್ಶನ ಉದ್ಘಾಟಿಸಲು ಬಂದಿದ್ದ ಬಿಹಾರಿನ ಹಣಕಾಸು ಮಂತ್ರಿ ದರೋಗ ಪ್ರಸಾದ್‌ರನ್ನು ವಿದ್ಯಾರ್ಥಿ ಚಳವಳಿಗಾರರ ಬೆಂಬಲಿಗರು ಕಪ್ಪು ಬಾವುಟ ಹಿಡಿದು ಪ್ರತಿಭಟಿಸಿದರು ಪೋಲೀಸರ ಬಂದೋಬಸ್ತು ಬಲವಾಗಿತ್ತು.

★

ಯೂರಿಯ ಪತ್ತೆ

ಬಳ್ಳಾರಿ — ಹಗರಿ ಆಂಧ್ರ ಗಡಿಯ ಬಳಿ ರೂ 19 ಸಾವಿರ ಬೆಲೆಯ 9 ಟನ್ ಗಳ ತೂಕದ 180 ಚೀಲ ಯೂರಿಯ ಸಾಗಿಸುತ್ತಿದ್ದ ಲಾರಿಯನ್ನು ಇಲ್ಲಿ ಹಿಡಿದರು ಡ್ರೈವರ್‌ನನ್ನು ಬಂಧಿಸಲಾಗಿದೆ.

ವುಡ್‌ಲಾಂಡ್ಸ್ 22 11 74 ರಿಂದ

ಅಮೋಘ 3 ನೇ ವಾರ

ರಾಜೇಶ್ ಖನ್ನ, ಜೀನತ್ ಅಮಾನ್,
ಪ್ರೇಂ ಚೋಪ್ರ, ಯೋಗಿತಾ ಬಾಲಿ ಅಭಿನಯಿಸಿರುವ
ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಅ ಜ ನಾ ಬಿ

ಸಂಗೀತ – ಆರ್. ಡಿ. ಬರ್ಮನ್ ನಿರ್ದೇಶನ – ಶಕ್ತಿ ಸಾಮಂತ್

ದಿನ ೫ ಪ್ರದರ್ಶನಗಳು

ಅ ಪೆ ರಾ 25 11 74 ರಿಂದ

ಮ ಹೇ ಶ್ವ ರಿ

4 ದಿನಗಳು

ಜೆಮಿನಿ ಗಣೇಶ್ — ಸಾವಿತ್ರಿ ಇವರ ಅಭಿನಯದಿಂದ ಕೂಡಿದ
ಅಮೋಘ ತಮಿಳು ಚಿತ್ರ

ದಿನ 3 ಪ್ರದರ್ಶನಗಳು

ಅನಾಹುತದಿಂದಲೂ ಸ್ವಾರ್ಥ

1972 ರಲ್ಲಿ ನಿಕಾರ್ಗುವಾದಲ್ಲಿ ಭೂಕಂಪವಾಗಿ ಭಾರಿ ಅನಾಹುತ ಉಂಟಾಗಿ ಜನರು ಅಪಾರ ಕಷ್ಟಕ್ಕೀಡಾದರು ; ಈ ಅನಾಹುತ ಅಡಳಿತೆಯಲ್ಲಿರುವ ಸರ್ವಾಧಿಕಾರಿ ಸೋಮೋಜಾ ಕುಟುಂಬಕ್ಕೆ ತುಂಬಾ ಲಾಭದಾಯಕವಾಗಿ ಪರಿಣಮಿಸಿತು. ನಾಲ್ಕು ದಶಕಗಳಿಂದ ಅಡಳಿತ ನಡೆಸುತ್ತಿರುವ ಸೋಮೋಜಾ ವಿದೇಶೀ ದೇಶಗಳಿಂದ ಪರಿಹಾರಕ್ಕಾಗಿ ಬಂದ ಹಣವನ್ನು ತನ್ನ ಸ್ವಂತ ಅನಿವಾರ್ಯಕತೆಗಳಿಗೆ, ಚುನಾವಣೆಗೆ ಬಳಸಿಕೊಂಡ ಎಂದು ಪಶ್ಚಿಮ ಜರ್ಮನಿಯ " ಸ್ಪೈಗೆ " ಪತ್ರಿಕೆ ಬರೆದಿದೆ : ಈ ವರ್ಷ ಸೆಪ್ಟಂಬರು 1 ರಂದು ನಡೆದ ಚುನಾವಣೆಗಳಲ್ಲಿ ಅತಿ ಜಯ ಗಳಿಸಿದ ; ಸೋಮೋಜಾನನ 24 ವಯಸ್ಸಿನ ಪುತ್ರ ಕೂಡ 1972 ರ ಅನಾಹುತದಿಂದ ಲಾಭ ಪಡೆದ ; ಭೂಕಂಪ ಅನಾಹುತದಲ್ಲಿ ಅವನು ನಡೆಸಿದ ಕಾರ್ಯಕ್ಕಾಗಿ ಅವನಿಗೆ ಕರ್ನಲ್ ಹುದ್ದೆ ದೊರಕಿತು.

ವ ಚ ನಾ ಮೃ ತ

ಅಮೃತಸಾಗರದೊಳಗಿದ್ದು ಅಕಳ ಚಿಂತೆಯೇಕೆ ?
ಮೇರುಮಂದಿರದೊಳಗಿದ್ದು ಜರಗ ತೊಳೆವ ಚಿಂತೆಯೇಕೆ ?
ಶ್ರೀಗುರುವಿನೊಳಗಿದ್ದು ಮುಕ್ತಿಯ ಚಿಂತೆಯೇಕೆ ?
ಕರಸ್ಥಲದೊಳಗೆ ಲಿಂಗವಿದ್ದ ಬಳಿಕ
ಮತ್ತಿನ್ನಾವ ಚಿಂತೆಯೇಕೆ ಹೇಳಾ ಗುಹೇಶ್ವರಾ.

— ಅಲ್ಲಮ್ಮ ಪ್ರಭುದೇವರು [ವಿಶ್ವಕಲ್ಯಾಣ]

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Quality Printing Neat Binding

Lakshminarasimha Press

Sivarampet, Mysore 1

Protect the Cow

Help The Gorakshana

— Humanitarian Propoganda Monthly....

A Superb Tonic

Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore